(ಆ) ಚುಕ್ಕೆಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು

ಶ್ರೀ ಟಿ.ಬಿ. ಜಯಚಂದ್ರ (ಮಾನ್ಯ ಕಾನೂನು, ಮತ್ತು ಸಂಸದೀಯ ವ್ಯವಹಾರಗಳು ಮತ್ತು ಪಶು ಸಂಗೋಪನೆ ಸಚಿವರು):– ದಿನಾಂಕ: 24.06.2014ರ ಎರಡನೇ ಪಟ್ಟಿಯಿಂದ ಲಿಖಿತ ಮೂಲಕ ಉತ್ತರಿಸುವ 56 ಪ್ರಶ್ನೆಗಳ ಪೈಕಿ, 32 ಪ್ರಶ್ನೆಗಳ ಉತ್ತರಗಳನ್ನು ಸದನದಲ್ಲಿ ಮಂಡಿಸುತ್ತಿದ್ದೇನೆ.

ಅಧ್ಯಕ್ಷರು : ಮುಂಡಿಸಲಾಯಿತು.

(ಅನುಬಂಧ–1)

3 : ಮಾನ್ಯ ಸಭಾಧ್ಯಕ್ಷರ ಅಪ್ಪಣೆ ಮೇರೆಗೆ ಪ್ರಸ್ತಾಪಿಸಲಾದ ವಿಷಯಗಳು

1. ವಿಷಯ : ಟಿ.ಇ.ಟಿ. ಪರೀಕ್ಷೆ ಪ್ರಶ್ನೆ ಪತ್ರಿಕೆ ಬಹಿರಂಗಗೊಂಡಿರುವ ಬಗ್ಗೆ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ: ಸಿರಸಿ ಮಾನ್ಯ ಅಧ್ಯಕ್ಷರೆ, ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ಇರುವುದಿಲ್ಲ. ಇದನ್ನು ಯಾರು ಕೇಳಿಸಿಕೊಳ್ಳುತ್ತಿದ್ದಾರೆ ಎನ್ನುವುದು ಗೊತ್ತಾಗಬೇಕು.

ಅಧ್ಯಕ್ಷರು : ಎಲ್ಲಾದಕ್ಕೂ ಇದ್ದಾರೆ. ಕೇಳಿಸಿಕೊಳ್ಳುತ್ತಿದ್ದಾರೆ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ: ಮಾನ್ಯ ಕಾನೂನು ಸಚಿವರ ಗಮನವನ್ನು ಸೆಳೆದೆ.

ಅಧ್ಯಕ್ಷರು : ನೀವು raise ಮಾಡುವುದಾದರೆ ಮಾಡಿ, ಇಲ್ಲವಾದರೆ ಮುಂದಕ್ಕೆ ಹೋಗೋಣ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ: ಮಾನ್ಯ ಅಧ್ಯಕ್ಷರೆ, ಪ್ರಾಥಮಿಕ ಮತ್ತು ಪ್ರೌಢಶಾಲಾ ಶಿಕ್ಷಕರ ಅರ್ಹತಾ ಪರೀಕ್ಷೆ (ಟಿಇಟಿ) ಮೊನ್ನೆ ನಡೆಯಿತು. ಪ್ರಶ್ನೆ ಪತ್ರಿಕೆ ಬಹಿರಂಗಗೊಂಡಿದೆ. ಆ ಕಾರಣದಿಂದಾಗಿ ಯಾರು ಪರೀಕ್ಷೆಗೆ ಕುಳಿತಂತಹ ಶಿಕ್ಷಕರು ಇದ್ದಾರೋ ಅವರೆಲ್ಲರೂ ಸಹ ಆತಂತಕ್ಕೆ ಒಳಗಾಗಿದ್ದಾರೆ. ಅನೇಕರಿಗೆ ಪ್ರಶ್ನೆ ಪತ್ರಿಕೆ ಸಿಕ್ಕಿದೆ, ಅನೇಕರಿಗೆ ಪ್ರಶ್ನೆ ಪತ್ರಿಕೆ ಸಿಕ್ಕಿಲ್ಲ. ಪ್ರಶ್ನೆ ಪತ್ರಿಕೆ ಸಿಗದಿರುವವರ ದೊಡ್ಡ ಸಂಕ್ಯೆ ಇದೆ.

ಮಾನ್ಯ ಶಿಕ್ಷಣ ಸಚಿವರು ಬಂದರು. ಅವರಿಗೆ ಈ ವಿಷಯ ಗೊತ್ತಿದೆ, ಅವರು ನಿನ್ನೆ ದಿವಸ ವಿಧಾನ ಪರಿಷತ್ತಿನಲ್ಲಿ ಉತ್ತರವನ್ನು ಹೇಳಿದ್ದಾರೆ. ನನ್ನ ಪಾಯಿಂಟ್ ಇಷ್ಟೇ. ಯಾರು ಈ ಪ್ರಶ್ನೆ ಪತ್ರಿಕೆ ಸೋರಿಕೆಯಗುವಂತೆ ಮಾಡುತ್ತಾರೋ ಅವರನ್ನು ಬಂಧಿಸಿದ್ದಾರೆಂದು ಹೇಳಿದ್ದಾರೆ. ಶಿವಕುಮಾರ್ ಮತ್ತು ಇನ್ನು ಕೆಲವರನ್ನು ಬಂಧಿಸಿದ್ದಾರೆ. ನಾನು ಶಿಕ್ಷಣ ಸಚಿವನಾಗಿ ನೋಡಿದ್ದೇನೆ. ನಾನು ಶಿಕ್ಷಣ ಸಚಿವರನ್ನು ಮತ್ತು ಗೃಹ ಸಚಿವರಲ್ಲಿ ವಿನಂತಿಯನ್ನು ಮಾಡಿಕೊಳ್ಳುತ್ತೇನೆ. ಪ್ರತಿ ಸಲ ಇವರೇ ಪ್ರಶ್ನೆ ಪತ್ರಿಕೆಯನ್ನು ತೆಗೆದುಕೊಂಡು ಹೋಗುವುದು. ಇವರ ಮೇಲೆ ಕೇಸ್ ಬುಕ್ ಮಾಡುತ್ತಾರೆ. ಇವರು ಬೇಲ್ ತೆಗೆದುಕೊಂಡು ಹೊರಗೆ ಬರುತ್ತಾರೆ, ಮತ್ತೆ ಪ್ರಶ್ನೆ ಪತ್ರಿಕೆ ಲೀಕ್ ಮಾಡುತ್ತಾರೆ. System ನಲ್ಲಿ foolproof ಆಗಬೇಕು. ಇವರ ಮೇಲೆ ಗಂಭೀರವಾದ ಗೂಂಡಾ ಆಕ್ಟ್ ಮತ್ತು ಇನ್ನಿತರ ಗಂಭೀರವಾದ ಬೇರೆ ಯಾವ ಆಕ್ಟ್ ಇದೆಯೋ ಅವುಗಳನ್ನು ಹಾಕಿ ಅವರ ಮೇಲೆ ಗಂಭೀರವಾದ ಕ್ರಮವನ್ನು ತೆಗೆದುಕೊಳ್ಳದೇ ಹೋದರೆ, ಮತ್ತೆ ಇದೇ ಪುನರಾವರ್ತನೆ ಆಗುತ್ತದೆ. ಅದು ಬಹಿರಂಗಗೊಂಡಿರುವುದು ಏಕೆ ಎನ್ನುವುದು ತನಿಖೆ ಆಗಬೇಕು ಮತ್ತು ಮರು ಪರೀಕ್ಷೆ ಮಾಡುತ್ತಾರೋ ಇಲ್ಲವೋ ಎನ್ನುವುದು ಸ್ಪಷ್ಟಗೊಳ್ಳಬೇಕು. ಏಕೆಂದರೆ ಪ್ರಶ್ನೆ ಪತ್ರಿಕೆ ಸಿಕ್ಕಿರುವಂಥವರು ಸಂತೋಷದಲ್ಲಿದ್ದಾರೆ, ಸಿಗದಿರುವವರು ಆತಂಕದಲ್ಲಿದ್ದಾರೆ. ಹಾಗಾಗಿ ಅದರ ಬಗ್ಗೆಯೂ ಸ್ಪಷ್ಟವಾಗಬೇಕು. ಈ ವಿಷಯದಲ್ಲಿ ಶಿಕ್ಷಣ ಸಚಿವರು ಗಂಭೀರವಾದ ಈ ಸಮಸ್ಯೆಯನ್ನು ಬಗೆಹರಿಸುವುದಕ್ಕೆ ಮುಂದಾಗಬೇಕು. ಗೃಹ ಇಲಾಖೆಯ ಸಹಕಾರವನ್ನು ತೆಗೆದುಕೊಳ್ಳಬೇಕು. ಹಿಂದೆ CoD ತನಿಖೆ ಎಲ್ಲಾ ಆಗಿದೆ. ಇವರು ಬೇಲ್ ಮೇಲೆ ಬಂದು ಬಿಡುತ್ತಾರೆ. ತಕ್ಷಣ ಇದರ ಬಗ್ಗೆ ಕ್ರಮ ಕೈಗೊಳ್ಳಬೇಕು.

ಶ್ರೀ ವೈ.ಎಸ್.ವಿ. ದತ್ತ : ಎಲ್ಲರೂ ಗುಂಪುಗುಂಪಾಗಿ ಸಂತೆಮಾಡಿಕೊಂಡು ಮಾತನಾಡುತ್ತಿದ್ದಾರೆ.

ಅಧ್ಯಕ್ಷರು : ಮಾನ್ಯ ಸದಸ್ಯರುಗಳು ಅಲ್ಲಲ್ಲಿ ಗುಂಪು ಗುಂಪಾಗಿ ಮಾತನಾಡುತ್ತಿದ್ದಾರೆ. ಇದೇನೂ ಸಂತೆ ಅಲ್ಲ. ದಯವಿಟ್ಟು ಮಾನ್ಯ ಸದಸ್ಯರುಗಳು ಕುಳಿತುಕೊಂಡು ಮಾತನಾಡಿ.

ಶ್ರೀ ವೈ.ಎಸ್.ವಿ. ದತ್ತ : ಎಷ್ಟು important ಆಗಿರುವ ವಿಷಯವನ್ನು ಹೇಳುತ್ತಿದ್ದಾರೆ. ವಿದ್ಯಾರ್ಥಿಗಳು ಕಂಗಾಲಾಗಿದ್ದಾರೆ.

ಶ್ರೀ ಕಿಮ್ಮನೆ ರತ್ನಾಕರ್ (ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು):– ಮಾನ್ಯ ಅಧ್ಯಕ್ಷರೆ, ಮಾನ್ಯ ಹಿರಿಯ ಸದಸ್ಯರು ಮಾಜಿ ಸಚಿವರಾಗಿರುವಂತಹ ಕಾಗೇರಿಯವರು ಏನು ಹೇಳಿದ್ದಾರೆ ಇದರೊಳಗೆ ಘಟನೆ ನಡೆದಿರುವಂಥದ್ದು ಸತ್ಯವಿದೆ. ಆದರೆ ಈ ಘಟನೆಯಲ್ಲಿ ನಮ್ಮ ಶಿಕ್ಷಣ ಇಲಾಖೆಯವರು ಯಾರೂ ಕೂಡ ಇದರಲ್ಲಿ ಭಾಗಿಯಾಗಿಲ್ಲ.

ಅಧ್ಯಕ್ಷರು : ಭಾಗಿಯಾಗಿಲ್ಲವಾದರೆ ಕೊಟ್ಟವರಿಗೇ ಮತ್ತೆ ಏಕೆ ಕೊಡುತ್ತೀರಿ?

ಶ್ರೀ ಕಿಮ್ಮನೆ ರತ್ನಾಕರ್ : ಶಿಕ್ಷಣ ಇಲಾಖೆಯ ಪ್ರಶ್ನೆ ಪತ್ರಿಕೆಯನ್ನು ನಾವು ಏನು ಮಾಡಿದ್ದೇವೆ? ಅದನ್ನು ರಾಜ್ಯದ ಎಲ್ಲಾ ಜಿಲ್ಲಾ ಖಜಾನೆಯಲ್ಲಿ ಇಡುವಂತಹ ಪ್ರಯತ್ನವನ್ನು ಎಲ್ಲಾ ಸಂದರ್ಭದಲ್ಲಿಯೂ ಮಾಡಿರುವುದು ಇದೆ. ಇದೇ ರೀತಿಯಲ್ಲಿ ಮೊನ್ನೆ ನಡೆದಿರುವಂತಹ ಪರೀಕ್ಷೆಯಲ್ಲಿಯೂ ಮಾಡಿದ್ದೇವೆ. ಖಜಾನೆಯಿಂದ ತೆಗೆದುಕೊಂಡು ಹೋಗುವಂತಹ ಸಂದರ್ಭದಲ್ಲಿ ಖಜಾನೆಯ ಅಧಿಕಾರಿಗಳು ಮಾಡಿರುವಂತಹ ತಪ್ಪಿನಿಂದ ಈ ಘಟನೆ ನಡೆದಿರುವುದು. ಆ ಕಾರಣದಿಂದ ನಾನು ಶಿಕ್ಷಣ ಅಧಿಕಾರಿಗಳು ಯಾರು, ಶಿಕ್ಷಣ ಇಲಾಖೆಯ ಅಧಿಕಾರಿಗಳು ಎಂದು ನೋಡುತ್ತೇನೆ.

(ಗೊಂದಲ)

ಅಧ್ಯಕ್ಷರು : ಮಾನ್ಯ ಸದಸ್ಯರು ಮುಖ್ಯವಾಗಿ ಹೇಳಿದ್ದು ಏನೆಂದರೆ, ಹಿಂದೆ ಅವರ ಕಾಲದಲ್ಲಿ ಯಾರು ಒಬ್ಬರು ಸಿಕ್ಕಿಹಾಕಿಕೊಂಡಿದ್ದರೋ ಅದೇ ವ್ಯಕ್ತಿ ಮತ್ತೆ ಸಿಕ್ಕಿಹಾಕಿಕೊಂಡಿದ್ದಾರೆ.

(ಗೊಂದಲ)

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ : ಹಿಂದಿನ ಸರ್ಕಾರದಿಂದಲೂ ಅವರೇ ಮಾಡಿದ್ದರು.

(ಗೊಂದಲ)

ಅಧ್ಯಕ್ಷರು : ಒಬ್ಬರು ಖಾಯಂ ಗಿರಾಕಿ ಇದ್ದಾರೆ ಎಂದು ಹೇಳುತ್ತಿದ್ದಾರೆ.

(ಗೊಂದಲ)

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ: ಮಾನ್ಯ ಅಧ್ಯಕ್ಷರೆ ಇವನು habitual ಇದ್ದಾನೆ. ಇವನೇ ಮಾಡುವುದು. ಮಾನ್ಯ ಗೃಹ ಸಚಿವರಲ್ಲಿ ನನ್ನದೊಂದು ವಿನಂತಿ ಇದೆ.

ಶ್ರೀ ಕಿಮ್ಮನೆ ರತ್ನಾಕರ್ : ಮಾನ್ಯ ಅಧ್ಯಕ್ಷರೆ, ನಾನು ಮೊದಲು ಉತ್ತರ ಕೊಟ್ಟು ಬಿಡುತ್ತೇನೆ. ಆನಂತರ ಮಾನ್ಯ ಸದಸ್ಯರು ಪ್ರಶ್ನೆಯನ್ನು ಕೇಳಲಿ.

ಅಧ್ಯಕ್ಷರು : ಆಯಿತು, ಮಾತನಾಡಿ.

ಶ್ರೀ ಕಿಮ್ಮನೆ ರತ್ನಾಕರ್ : ಮಾನ್ಯ ಸದಸ್ಯರು interfere ಆಗಲಿಲ್ಲವೆಂದರೆ ನಾನು ಹೇಳುತ್ತೇನೆ. ಈ ಘಟನೆಯಲ್ಲಿ ಇಡೀ ರಾಜ್ಯದ ಯಾವುದೇ ಕೇಂದ್ರಗಳಿಂದ ನಮ್ಮ ಶಿಕ್ಷಣ ಇಲಾಖೆಗೆ ಈ ಪತ್ರಿಕೆ ಬಯಲಾಗಿರುವಂಥದ್ದು ಮತ್ತು ಅದರಿಂದ ಪರೀಕ್ಷೆಗೆ ಕುಳಿತುಕೊಂಡಿರತಕ್ಕವರಿಗೆ ಏನು ತೊಂದರೆಯಾಗಿದೆ ಎಂದು ಯಾವುದೇ ರೀತಿಯಲ್ಲಿ ಲಿಖಿತವಾಗಿ ಅಥವಾ ಮೌಖಿಕವಾಗಿ ಬಂದಿಲ್ಲ. ಆದರೆ ತತ್‌ಕ್ಷಣವಾಗಿ ನಮ್ಮ ಪೊಲೀಸ್ ಇಲಾಖೆಯವರು ಕಾರ್ಯೋನ್ಮುಖರಾಗಿದ್ದಾರೆ. ಅದರೊಳಗೆ ತಕ್ಷಣವೇ ಸಿಕ್ಕಿದೆ. ಅಲ್ಲಿ ಏನು misplace ಆಗಿರುವಂಥದ್ದು, ಅದು ಬೆಂಗಳೂರಿನಲ್ಲಿ ಆಗಿದೆ. ಅದರಿಂದ ಯಾರಿಗೂ ಕೂಡ ಪರೀಕ್ಷೆಗಿಂತ ಮುಂಚಿತವಾಗಿ ಪ್ರಶ್ನೆ ಪತ್ರಿಕೆ ಅಥವಾ ಉತ್ತರ ಪತ್ರಿಕೆ ವಿತರಣೆಯಾಗಿರುವಂತಹ ಘಟನೆ ಬಂದಿಲ್ಲ. ಆದರೆ ನಮ್ಮ ಇಲಾಖೆ ವತಿಯಿಂದಲೂ ನಾವು ಕ್ರಮ ತೆಗೆದುಕೊಂಡಿದ್ದೇವೆ. ಮಾನ್ಯ ಮಾಜಿ ಸಚಿವರು ಹೇಳಿರುವಂತಹ ಘಟನೆಯಲ್ಲಿ ಶಿವಕುಮಾರ್ ಎನ್ನುವವರು ಏನಿದ್ದಾರೆ, ಅದು 2009 ರಲ್ಲಿ ನಡೆದಿರುವಂತಹ ಘಟನೆ. ಅದರ ಮೇಲೆ ಅವರಿಗೆ ಚಾರ್ಜ್‌ಶೀಟ್ ಆಗಿದೆ. ಅವರು ನಿವೃತ್ತಿಯಾಗಿರುವಂತವರು. ಅವರು ಶಿಕ್ಷಣ ಇಲಾಖೆಯಲ್ಲಿ ಇಲ್ಲ. ಅವರ ಮೇಲೆ ಪೊಲೀಸ್ ಇಲಾಖೆ ಚಾರ್ಜ್‌ಶೀಟ್ ಹಾಕಿ ಕೇಸ್ ನಡೆಯುತ್ತಿದೆ. 2011 ರಲ್ಲಿ

ಪಿ.ಯು.ಸಿ.ಗೆ ಸಂಬಂಧಪಟ್ಟಂತೆ ಘಟನೆ ನಡೆದಿದೆ. 2012 ರಲ್ಲಿ ಒಂದು ಘಟನೆ ನಡೆದಿದೆ. ಅದರ ಬಗ್ಗೆಯೂ ಪೊಲೀಸ್ ಇಲಾಖೆಯವರು ಚಾರ್ಜ್‌ಶೀಟ್ ಹಾಕಿದ್ದಾರೆ. ತನಿಖೆ ನಡೆಯುತ್ತಿದೆ. ಅದರಲ್ಲಿಯೂ ಕೂಡ Treasury ಯವರೇ ಮಾಡಿರುವದು. ಅದರಲ್ಲಿಯೂ ಇಬ್ಬರು Treasury Officers ಇದ್ದಾರೆ. ಉಳಿದವರ ಬಗ್ಗೆಯೂ ಕೂಡ ಇಲಾಖೆ ತನಿಖೆಯನ್ನು ಕೈಗೊಂಡಿದೆ. ಈಗ ಏನು ಪರೀಕ್ಷೆ ನಡೆದಿದೆ ಅದನ್ನು ತಡೆಹಿಡಿಯುವಂತಹ ಯಾವುದೇ ಘಟನೆಗಳು ನಡೆದಿಲ್ಲ. ಪ್ರಶ್ನೆ ಪತ್ರಿಕೆ ಬಯಲಾಗಿರುವುದರಿಂದ ತೊಂದರೆಯಾಗಿದೆ ಎಂದು ಪರೀಕ್ಷಾರ್ಥಿಗಳಿಂದ ಯಾವುದೇ ಲಿಖಿತವಾಗಿ ದೂರು ಬಂದಿಲ್ಲ.

ಅಧ್ಯಕ್ಷರು : ಹಾಗಾದರೆ ಪೊಲೀಸ್‌ನವರು ಏಕೆ ಅವರನ್ನು ಹಿಡಿದುಕೊಂಡರು?

ಶ್ರೀ ಕಿಮ್ಮನೆ ರತ್ನಾಕರ್ : ಈಗ ತನಿಖೆ ನಡೆಯುತ್ತಿದೆ. CCB police ರವರು ಇವತ್ತು ಕೊಪ್ಪಳ ಜಿಲ್ಲೆಗೆ ಹೋಗಿದ್ದಾರೆ. ನಾವು ಮಾಹಿತಿ ಪಡೆದುಕೊಂಡಿದ್ದೇವೆ. ಪೊಲೀಸ್ ಇಲಾಖೆಯಿಂದ ಪೂರ್ಣ ಮಾಹಿತಿ ದೊರಕಿದ ನಂತರ ಯಾರ್ಯಾರು ಇದಕ್ಕೆ ಸಂಬಂಧಪಟ್ಟಿದ್ದಾರೆ ಅವರನ್ನು ತನಿಖೆಗೆ ಒಳಪಡಿಸುತ್ತೇವೆ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ: ಮಾನ್ಯ ಅಧ್ಯಕ್ಷರೆ Home Minister ರವರಿಗೆ ಒಂದೇ ಒಂದು ಮನವಿ.

(ಗೊಂದಲ)

ಅಧ್ಯಕ್ಷರು : No ಚರ್ಚೆ ಆಗುವುದಿಲ್ಲ.

(ಗೊಂದಲ)

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ: Home Minister ರವರಿಗೆ ಸಂಬಂಧಪಟ್ಟಿದ್ದು.

(ಗೊಂದಲ)

ಅಧ್ಯಕ್ಷರು : Home Minister ರವರಿಗೆ ಇದಕ್ಕೆ ಸಂಬಂಧವಿಲ್ಲ.

(ಗೊಂದಲ)

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ: ನಾನು ಮಂತ್ರಿಯಾಗಿ ನನ್ನ ಅನುಭವದಲ್ಲಿ ಹೇಳುತ್ತಿದ್ದೇನೆ.

ಅಧ್ಯಕ್ಷರು : ತಾವು ಪ್ರಶ್ನೆಯನ್ನು Home Minister ರವರಿಗೆ ಕೇಳಿಲ್ಲ. ಶಿಕ್ಷಣ ಸಚಿವರಿಗೆ ಕೇಳಿದ್ದೀರಿ. ಅವರು ಉತ್ತರವನ್ನು ನೀಡಿದ್ದಾರೆ.

(ಗೊಂದಲ)

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ: ಅವರು ಉತ್ತರ ಹೇಳಿರು. ಪ್ರಶ್ನೆ ಪತ್ರಿಕೆಯನ್ನು leak ಮಾಡಿದವನು habitual ಇದ್ದಾನೆ. ಅವನ ಮೇಲೆ simple section ಹಾಕಿದರೆ ಬೇಲ್ ತೆಗೆದುಕೊಂಡು ಮತ್ತೆ ಮುಂದಿನ ವರ್ಷ ಅವನು ಅದನ್ನೇ ಮಾಡುತ್ತಾನೆ. ಇದು ಶಿಕ್ಷಣ ಇಲಾಖೆಯಲ್ಲಿ ಸಾಕಾಗಿ ಹೋಗಿದೆ. ನೀವು ಏನಾದರೂ serious section ಹಾಕುವ ಹಾಗೆ ನಿಮ್ಮ ಅಧಿಕಾರಿಗಳಿಗೆ ಹೇಳಬೇಕು. ನಾವು ನೀವು ಏನೇ ಮಾಡಿದರೂ ಅದು ಅವನ habit. ಅವನು ಅದನ್ನೇ ಮಾಡುತ್ತಾನೆ. ಹಾಗಾಗಿ ಪೊಲೀಸ್ ಇಲಾಖೆ ಬಿಗುವಾದ ಕ್ರಮವನ್ನು ತೆಗೆದುಕೊಳ್ಳಬೇಕಾಗುತ್ತದೆ. 3 ಲಕ್ಷದ 77 ಸಾವಿರ ಶಿಕ್ಷಕರು ಪರೀಕ್ಷೆಯನ್ನು ತೆಗೆದುಕೊಂಡಿರುತ್ತಾರೆ. ಇದು ಆತಂಕವಾಗಿದೆ. ಅನೇಕರಿಗೆ ಪ್ರಶ್ನೆ ಪತ್ರಿಕೆ ಸಿಕ್ಕಿದೆ. ಅವರು ಹೆಚ್ಚಿನ ಅಂಕ ಪಡೆದುಕೊಂಡು ಪಾಸ್ ಆಗುತ್ತಾರೆ. ಉಳಿದವರಿಗೆ ಪ್ರಶ್ನೆ ಪತ್ರಿಕೆ ಸಿಕ್ಕಿಲ್ಲ. ಹಾಗಾಗಿ ಮರುಪರೀಕ್ಷೆಯ ಬಗ್ಗೆ ಸರ್ಕಾರ ಗಂಭೀರವಾಗಿ ಯೋಚಿಸಬೇಕು. ಇದು ಬಹಳ ಮುಖ್ಯವಾದದ್ದು. 3 ಲಕ್ಷ 77 ಸಾವಿರ ಶಿಕ್ಷಕರು ಪರೀಕ್ಷೆಯಲ್ಲಿ ಕುಳಿತುಕೊಂಡಿದ್ದಾರೆ. ಹಾಗಾಗಿ ಇದು ಬಹಳ ಗಂಭೀರವಾದ ವಿಷಯವಾಗಿದೆ. ಪ್ರಶ್ನೆ ಪತ್ರಿಕೆ leak ಆಗಿರುವ ಬಗ್ಗೆ ಕ್ರಮ ತೆಗೆದುಕೊಳ್ಳಬೇಕಾಗಿದೆ. ಈ ರೀತಿ ಆಗುವುದಕ್ಕೆ ಕಾರಣಗಳು ಸಾಕಷ್ಟಿವೆ. ಪ್ರಶ್ನೆ ಪತ್ರಿಕೆಯನ್ನು ಮುದ್ರಣ ಮಾಡಲು ಯಾರಿಗೆ ವಹಿಸಿದ್ದೀರಿ ಎನ್ನುವುದನ್ನೂ ಸರ್ಕಾರ ಬಹಿರಂಗಪಡಿಸಲಿ. ನಮಗೆ ಇರುವ ಮಾಹಿತಿ ಪ್ರಕಾರ ಯಾರ ಮೇಲೆ ತನಿಖೆ ಆಗುತ್ತಿದೆಯೋ ಅವರಿಗೇ ಪ್ರಶ್ನೆ ಪತ್ರಿಕೆಯನ್ನು ಮುದ್ರಣ ಮಾಡಲು ಕೊಟ್ಟಿದ್ದೀರಿ. ಮೊದಲ ಬಾರಿಗೆ ಈ ರೀತಿ ನಮ್ಮ CET Cell ನಲ್ಲಿ ಆಗುತ್ತಿರುವುದು. ನಮ್ಮ ಇಲಾಖೆಯಲ್ಲಿಯೇ ಇದು ಎಂದೂ ಆಗಿರಲಿಲ್ಲ. ಅನೇಕ

ಸಂಗತಿಗಳನ್ನು ತಾವೂ ಕೂಡ ಸೂಕ್ಷ್ಮವಾಗಿ ತನಿಖೆ ಮಾಡಿ ಎಲ್ಲಿ ದೋಷಗಳಿವೆ ಎಂದು ನೋಡಬೇಕೆಂದು ಆಗ್ರಹಿಸುತ್ತೇನೆ.

ಶ್ರೀ ವೈ.ಎಸ್.ವಿ. ದತ್ತ: ಮಾನ್ಯ ಅಧ್ಯಕ್ಷರೆ ಇದಕ್ಕೆ ಉತ್ತರ ಇಲ್ಲವೇ?

ಅಧ್ಯಕ್ಷರು : ಅವರು ಎಲ್ಲಿ ಹೇಳುತ್ತಾರೆ?

ಶ್ರೀ ಕಿಮ್ಮನೆ ರತ್ನಾಕರ್ : ನಾನು ಉತ್ತರ ಕೊಟ್ಟಿದ್ದೇನೆ.

ಅಧ್ಯಕ್ಷರು : ಮಾನ್ಯ ಸಚಿವರೆ, ಇದು ಬಹಳ Sensitive issue. ಮಾನ್ಯ ಸದಸ್ಯರು ಹೇಳಿರುವುದನ್ನು ಗಮನಿಸಿ ಸಂಬಂಧಪಟ್ಟವರನ್ನು ಕರೆಸಿ parade ಮಾಡಿ ಕ್ರಮವನ್ನು ತೆಗೆದುಕೊಳ್ಳಿ,

ಶ್ರೀ ಕಿಮ್ಮನೆ ರತ್ನಾಕರ್ : ಈಗಾಗಲೇ ಕ್ರಮವನ್ನು ತೆಗೆದುಕೊಂಡಿದ್ದೇವೆ.

ಅಧ್ಯಕ್ಷರು : ಏನು ಕ್ರಮವನ್ನು ತೆಗೆದುಕೊಂಡಿದ್ದೀರಿ ?

ಶ್ರೀ ಕಿಮ್ಮನೆ ರತ್ನಾಕರ್ : ಪೊಲೀಸ್ ಇಲಾಖೆಯವರೂ ಸಹ ಕ್ರಮವನ್ನು ತೆಗೆದುಕೊಂಡಿದ್ದಾರೆ.

ಅಧ್ಯಕ್ಷರು : ಮಾನ್ಯ ದತ್ತಾರವರು ಮಾತನಾಡುವುದು.

ಶ್ರೀ ವೈ.ಎಸ್.ವಿ. ದತ್ತ: ಮಾನ್ಯ ಅಧ್ಯಕ್ಷರೆ..

ಅಧ್ಯಕ್ಷರು : ಒಂದು ನಿಮಿಷ ಮಾನ್ಯ ದತ್ತರವರೆ, ಇದು policy matter ಇರುವುದರಿಂದ ಸ್ವಲ್ಪ ವಿವರವಾದ ಚರ್ಚೆಯಾಗವೇಕಾಗಿದೆ. ಆದುದರಿಂದ ಅದಕ್ಕೆ ಪ್ರತ್ಯೇಕವಾದ ಚರ್ಚೆಗೆ ನಿಮಗೆ ಅವಕಾಶ ಮಾಡಿಕೊಡುತ್ತೇನೆ.

2. ವಿಷಯ: ಅನ್ನಭಾಗ್ಯ ಯೋಜನೆ ಹಾಗೂ ಪಡಿತರ ಚೀಟಿ ವಿತರಣೆ ಬಗ್ಗೆ.

ಶ್ರೀ ವೈ.ಎಸ್.ವಿ. ದತ್ತ (ಕಡೂರು): ಮಾನ್ಯ ಅಧ್ಯಕ್ಷರೆ, ನಾನು ಹೇಳಿಬಿಡುತ್ತೇನೆ, ಆನಂತರ ತಾವು ಹೇಳಿ, ತಾವು ಹೇಳಿದ್ದಕ್ಕೆ ನಾನು ಒಪ್ಪಿಕೊಳ್ಳುತ್ತೇನೆ. ಸರ್ಕಾರ 'ಅನ್ನ ಭಾಗ್ಯ ಯೋಜನೆ' ತಂದಿರುವುದು ಒಂದು ಮಹತ್ವದ ಯೋಜನೆ . ನಾವೂ ಕೂಡ ಕೊಂಡಾಡಿದ್ದೇವೆ. ಆದರೆ ನಮ್ಮ ಹಳ್ಳಿ ಕಡೆ ಒಂದು ಗಾದೆ ಮಾತು ಇದೆ.